ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ಹಿರಿಯೂರು

ಸಿ.ಸಿ ನಂಃ **1607/2021**

ಪಿರ್ಯಾದಿಃ ಹಿರಿಯೂರು ಗ್ರಾಮಾಂತರ ಪೋಲಿಸ್ ಠಾಣೆ

ವಿರುದ್ಧ

ಆರೋಪಿ: ಬೊಪ್ಪರಾಯ ತಂದೆ ರತ್ನಪ್ಪ,

35 ವರ್ಷ, ವಾಸಃ ಕೃಷ್ಣಪುರ ಗ್ರಾಮ,

ಧರ್ಮಪುರ ಹೋಬಳಿ,

ಹಿರಿಯೂರು ತಾಲ್ಲೂಕು.

ದೋಷಾರೋಪಣೆ

ನಾನು ಶ್ರೀ ಮೊಹಮ್ಮದ್ ಮೊಯಿನುದ್ದಿನ್, ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಹಿರಿಯೂರು, ಈ ಮೂಲಕ ನಿಮ್ಮನ್ನು ದೋಷಾರೋಪಣೆಗೆ ಗುರಿಪಡಿಸುವುದೇನೆಂದರೆ

ಚಾಸಾ.2 ಮತ್ತು 3 ರವರು 1 ನೇ ಆರೋಪಿತನೊಂದಿಗೆ ಮದುವೆ ಮಾತುಕೆತ ಮಾಡಿದ್ದು 1 ನೇ ಆರೋಪಿತನು ವರದಕ್ಷಿಣೆಯಾಗಿ ಬಂಗಾರದ ಕೊರಳ ಚೈನ್ನು ಉಂಗುರ ಮತ್ತು 4 ಜೊತೆ ಬಟ್ಟೆ ಕೊಡಲು ಬೇಡಿಕೆ ಇಟ್ಟದ್ದು ಚಾಸಾ.2 ರವರು ಮದುವೆ ಕಾಲದಲ್ಲಿ ವರದಕ್ಷಿಣೆಯಾಗಿ ಬಂಗಾರದ ಕೊರಳ ಚೈನು ಉಂಗುರ ಮತ್ತು 4 ಜೊತೆ ಬಟ್ಟೆ ಕೊಟ್ಟು 5 ಲಕ್ಷ ಖರ್ಚು ಮಾಡಿ ದಿನಾಂಕ 26.11.2017 ರಂದು ಗುರು ಹಿರಿಯರ ಸಮ್ಮುಖದಲ್ಲಿ ಧರ್ಮಪುರ ಗ್ರಾಮದ ವಾಸವಿ ಕಲ್ಯಾಣ ಮಂಟಪದಲ್ಲಿ ವಿವಾಹ ಮಾಡಿಕೊಟ್ಟಿದ್ದು ನಂತರ 1 ನೇ ಆರೋಪಿತನು ಚಾಸಾ.1 ರವರೊಂದಿಗೆ ಬೆಂಗಳೂರಿನ ವೈಟ್ ಪೀಲ್ಡ್ ಹತ್ತಿರದ ಬಾಡಿಗೆ ಮನೆ ಮಾಡಿಕೊಂಡು ಇರುವಾಗ 1 ನೇ ಆರೋಪಿತನು ಚಾಸಾ.1 ರವರಿಗೆ ಗಲಾಟೆ ಮಾಡುವುದು ಹೊಡೆಯುವುದು ಮಾಡಿದ್ದರಿಂದ ಚಾಸಾ.2, 3 ರವರು ಚಾಸಾ.1 ರವರಿಗೆ ತವರು ಮನೆಗೆ

ಕರೆದುಕೊಂಡು ಬಂದು ಇಟ್ಟುಕೊಂಡಿರುವಾಗ 1 ನೇ ಆರೋಪಿತನು ಚಾಸಾ.1 ರವರಿಗೆ ಮದುವೆಯ ಕಾಲಕ್ಕೆ ವರದಿಕ್ಷಿಣೆ ನೀಡಿಲ್ಲವೆಂದು ತನ್ನ 5 ಲಕ್ಷ ಸಾಲವನ್ನು ತೀರಿಸಲು ತವರು ಮನೆಯಿಂದ ಹಣವನ್ನು ತರಲು ಹೇಳಿ ಮಾನಸಿಕ ಮತ್ತು ದೈಹಿಕ ಕಿರುಕುಳ ನೀಡಿದ್ದು ಆ ಮೂಲಕ ಆರೋಪಿಯಾದ ನೀವು ಭಾ ದಂ ಸಂ ಕಲಂ 498(ಎ) ಸಹವಾಚಕ 34 ರ ಅಡಿಯಲ್ಲಿ ನನ್ನ ಸಂಜ್ಞೆಯಲ್ಲಿ ದಂಡಿಸಲ್ಪಡುವ ಅಪರಾಧ ಎಸಗಿದ್ದೀರೆಂದು ಆರೋಪಿಸಲಾಗಿದೆ .

2. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ದಿನಾಂಕ 21.04.2020 ರಂದು ಮಧ್ಯಾಹ್ನ 3 ರ ಸಮಯದಲ್ಲಿ ಕುಡಿದು ಬಂದು ಚಾಸಾ.1, 2 ಮತ್ತು 3 ರವರಿಗೆ 2 ಲಕ್ಷ ಹಣ ಕೊಡುವಂತೆ ಗಲಾಟೆ ಮಾಡಿ ಸೂಳೆ ಮುಂಡೆ ಬೋಳಿಮುಂಡೆ ಎಂದು ಬೆಡಾಡಿದ್ದು ಆ ಮೂಲಕ ಆರೋಪಿಯಾದ ನೀವು ಕಲಂ 3 ಮತ್ತು 4 ವರದಕ್ಷಿಣೆ ನಿಷೇಧ ಕಾಯ್ದೆ ಮತ್ತು ಭಾ ದಂ ಸಂ ಕಲಂ 504 ಸಹವಾಚಕ 34 ರ ಅಡಿಯಲ್ಲಿ ನನ್ನ ಸಂಜ್ಞೆಯಲ್ಲಿ ದಂಡಿಸಲ್ಪಡುವ ಅಪರಾಧ ಎಸಗಿದ್ದೀರೆಂದು ಆರೋಪಿಸಲಾಗಿದೆ .

2. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ದಿನಾಂಕ 21.04.2020 ರಂದು ಮಧ್ಯಾಹ್ನ 3 ರ ಸಮಯದಲ್ಲಿ ಕುಡಿದು ಬಂದು ಚಾಸಾ.1, 2 ಮತ್ತು 3 ರವರಿಗೆ 2 ಲಕ್ಷ ಹಣ ಕೊಡುವಂತೆ ಗಲಾಟೆ ಮಾಡಿ ಸೂಳೆ ಮುಂಡೆ ಬೋಳಿಮುಂಡೆ ಎಂದು ಬೆಡಾಡಿದ್ದು ಆ ಮೂಲಕ ನೀವು ಭಾ ದಂ ಸಂ ಕಲಂ 504 ಸಹವಾಚಕ 34 ರ ಅಡಿಯಲ್ಲಿ ನನ್ನ ಸಂಜ್ಞೆಯಲ್ಲಿ ದಂಡಿಸಲ್ಪಡುವ ಅಪರಾಧ ಎಸಗಿದ್ದೀರೆಂದು ಆರೋಪಿಸಲಾಗಿದೆ .

3. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು

ಚಾಸಾ.1 ರವರಿಗೆ ಕೈಗಳಿಂದ ಹೊಡೆದು ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು ಆ ಮೂಲಕ ಆರೋಪಿಯಾದ ನೀವು ಭಾ ದಂ ಸಂ ಕಲಂ 323 ಸಹವಾಚಕ 34 ರ ಅಡಿಯಲ್ಲಿ ದಂಡಿಸಲ್ಪಡುವ ಅಪರಾಧ ಎಸಗಿದ್ದೀರೆಂದು ಆರೋಪಿಸಲಾಗಿದೆ.

4. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ.1 ರವರಿಗೆ ಕುತ್ತಿಗೆ ಹಿಸುಕಿ ಸಾಯಿಸುತ್ತೇನೆಂದು ಪ್ರಾಣ ಬೆದರಿಕೆ ಹಾಕಿದ್ದು, ಆ ಮೂಲಕ ಆರೋಪಿಯಾದ ನೀವು ಭಾ ದಂ ಸಂ ಕಲಂ 506 ಸಹವಾಚಕ 34 ರ ಅಡಿಯಲ್ಲಿ ನನ್ನ ಸಂಜ್ಞೆಯಲ್ಲಿ ದಂಡಿಸಲ್ಪಡುವ ಅಪರಾಧ ಎಸಗಿದ್ದೀರೆಂದು ಆರೋಪಿಸಲಾಗಿದೆ .

(ಮೇಲ್ಕಂಡ ಆರೋಪದ ಮೇಲೆ ಆರೋಪಿತರಾದ ನೀವುಗಳು ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗಿರುತ್ತೀರೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ .)

ದಿನಾಂಕಃ 30.06.2022.
ಸ್ಥಳಃ ಹಿರಿಯೂರು

(ಮೊಹಮ್ಮದ್ ಮೊಯಿನುದ್ದಿನ್)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಹಿರಿಯೂರು.